ಆ) ಹಾಗಿದ್ದಲ್ಲಿ ಯಾವಾಗ ಮಂಜೂರು ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ.

ಆ) ಮೇಲಿನ ಎರಡು ಗ್ರಾಮಗಳ ಜನಸಂಖ್ಯೆ ೧೯೮೧ರ ಜನಗಣತಿಯ ಪ್ರಕಾರ ೭೪೭ ಮತ್ತು ೪೮೦ ಇರುವುದರಿಂದ ಸದ್ಯದ ನಿಯಮಾವಳಿಗಳ ಪ್ರಕಾರ ನಳದ ನೀರಿನ ಯೋಜನೆಗಳನ್ನು ಈ ಗ್ರಾಮಗಳಿಗೆ ಮಂಜೂರು ಮಾಡಲು ಅವಕಾಶವಿಲ್ಲ.

ಶ್ರೀ ಎಂ. ಎಲ್. ಮುತ್ತಣ್ಣನವರ್.—ಈಗಾಗಲೇ ಹೇಳಿದ ಪ್ರಕಾರ ಕಡಬಗಟ್ಟಿ ಮತ್ತು ನೆಲಗಂಟಿ ಗ್ರಾಮಗಳಿಗೆ ಮುಖ್ಯಮಂತ್ರಿಗಳ ನಿಧಿಯಿಂದ ಈ ಕೆಲಸ ತೆಗೆದುಕೊಳ್ಳಬೇಕೆಂದು ಆದೇಶ ಇತ್ತಿದ್ದಾರೆ. ಆದರೆ ತಮ್ಮ ಉತ್ತರದಲ್ಲಿ ಮಾಡಿಲ್ಲವೆಂದು ಹೇಳುತ್ತೀರಿ. ಈ ಎರಡೂ ಗ್ರಾಮಗಳು ಟ್ರೈಬಲ್ ವಿಲೇಜ್‌ಗಳಾಗಿದ್ದು. ಗುಡ್ಡದ ಮೇಲೆ ಇರುವುದರಿಂದ ಸಧ್ಯಕ್ಕೆ ನೀರನ್ನು ಟ್ರಾನ್ಸ್‌ಪೋರ್ಟ್ ಮಾಡಿ ಸರಬರಾಜು ಮಾಡುತ್ತಿದ್ದಾರೆ. ಆದ್ದರಿಂದ ಈ ಸ್ಕೀಮ್‌ನ್ನು ಮುಖ್ಯಮಂತ್ರಿಗಳ ನಿಧಿಯಿಂದ ಬೇಗನೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.— ಮಾನ್ಯ ಮುಖ್ಯ ಮಂತ್ರಿಗಳ ನಿಧಿಯಿಂದ ಹಣ ಕೊಟ್ಟರೆ ಈ ಎರಡೂ ಗ್ರಾಮಗಳಿಗೆ ಕೆರು ನೀರು ಯೋಜನೆಯನ್ನು ಮಾಡಲಾಗುವುದು. ಆದರೆ ಅಲ್ಲಿ ನಳದ ನೀರಿನ ಯೋಜನೆಗಳನ್ನು ಮಾಡುವುದಕ್ಕೆ ಆಗುವುದಿಲ್ಲ.

ತಾಲ್ಲೂಕು ಪಂಚಾಯಿತಿಯ ಸಮಿತಿಗೆ ಹೆಚ್ಚಿನ ಅಧಿಕಾರ

೬೮೭. ಶ್ರೀ ಐ.ಬಿ. ಶಂಕರ್ (ಚಿಕ್ಕಮಗಳೂರು)—ಮಾನ್ಯ ಗ್ರಾಮಾಭಿವೃದ್ಧಿ ಪಂಚಾಯತ ರಾಜ್ ಹಾಗು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಡಲ ಪಂಚಾಯ್ತಿ ಮತ್ತು ತಾಲ್ಲೂಕು ಸಲಹಾ ಸಮಿತಿಗಳು ಅಸ್ತಿತ್ವಕ್ಕೆ ಬಂದಿದ್ದರು ಸಹ ಕಾನೂನಿನಲ್ಲಿ ಮಂಡಲ ಪಂಚಾಯ್ತಿಯು ಎಲ್ಲಾ ವಿಚಾರಕ್ಕೂ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ವ್ಯವಹರಿಸಬೇಕಾಗಿರುವುದು ನಿಜವಲ್ಲವೆ ?

ಆ) ಹಾಗಿದ್ದಲ್ಲಿ ತಾಲ್ಲೂಕು ಪಂಚಾಯ್ತಿ ಸಮಿತಿಗೆ ಈ ಬಗ್ಗೆ ಯಾವ ಅಧಿಕಾರವನ್ನು ಕಾನೂನಿನಡಿಯಲ್ಲಿರುವುದಿಲ್ಲವಾದರಿಂದ ಮಂಡಲ ವ್ಯವಹಾರ ವಿಳಂಬವಾಗುತ್ತಿರುವುದು ನಿಜವೆ.

ಇ) ಹಾಗಿದ್ದಲ್ಲಿ ತಾಲ್ಲೂಕು ಪಂಚಾಯ್ತಿ ಸಮಿತಿಗೆ ಹೆಚ್ಚಿನ ಅಧಿಕಾರವನ್ನು ವಿಕೇಂದ್ರೀಕರಿಸಿ ವಹಿಸುವ ಬಗ್ಗೆ ಸರ್ಕಾರ ಯೋಚಿಸಿದೆಯೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು)—

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಶ್ರೀ ಐ ಬಿ. ಶಂಕರ್.—ಶ್ರೀ ನಜೀರ್ ಸಾಹೇಬ್ ಅವರು ಹಿರಿಯ ಮಂತ್ರಿಗಳು. ಅಧಿಕಾರ ವಿಕೇಂದ್ರೀಕರಣ ಮಾಡುವ ಕೆಲಸವನ್ನು ಆಸಕ್ತಿವಹಿಸಿ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಅದು ಈಗ ಬರೀ ಬಾಯಿಯಿಂದ ಹೇಳಿದ ಮಾತು ಆಗಿ ಕಾಣುತ್ತದೆ. ನಾನು ತಾಲ್ಲೂಕು ಸಮಿತಿಯ ಸದಸ್ಯನಾಗಿ ಪೋಸ್ಟ್‌ಮ್ಯಾನ್ ಕೆಲಸ ಮಾತ್ರ ಮಾಡುತ್ತಿದ್ದೇನೆ. ಇಂತಹ ಸಮಿತಿಯ ಅವಶ್ಯಕತೆ ಇಲ್ಲವೆ ? ಇಲ್ಲವೆಂದ ಮೇಲೆ ಅಲ್ಲಿ ಹೋಗಿ ಕುಳಿತುಕೊಂಡು ಅಧಿಕಾರಿಗಳ ವೇಳೆ ಹಾಳುಮಾಡಿ ಮಂಡಲ ಸದಸ್ಯರ ಕೆಲಸ ಹಾಳು ಮಾಡುವುದಕ್ಕೆ ಬದಲಾಗಿ ಈ ಸಮಿತಿಗಳನ್ನೇ ಏಕೆ ರದ್ದುಪಡಿಸಬಾರದು ಎಂಬುದು ನನ್ನ ಮೊದಲನೆಯ ಪ್ರಶ್ನೆ.

ಇನ್ನೂ ನನ್ನ ಎರಡನೆಯ ಪ್ರಶ್ನೆಗೂ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ. ಈ ಮಂಡಲ ಪಂಚಾಯಿತಿ ಮತ್ತು ತಾಲ್ಲೂಕಾ ಸಲಹಾ ಸಮಿತಿಗಳ ಉದ್ದೇಶ ಏನು ಎಂದು ಗೊತ್ತಾಗುತ್ತಿಲ್ಲ. ಮಂಡಲ ಪ್ರಧಾನರು ನಮ್ಮನ್ನೆಲ್ಲಾ ಕೂಡಿಸಿಕೊಳ್ಳುತ್ತಾರೆ ಚರ್ಚೆ ಮಾಡುತ್ತೇವೆ. ಕೆಲಸಗಳ ಪಟ್ಟಿ ಕೊಡುತ್ತಾರೆ ಅದನ್ನು ನಾವು ಪರಿಶೀಲನೆ ಮಾಡಿಂತ್ತೇವೆ ಮೇಲಕ್ಕೆ ಕಳುಹಿಸಿಕೊಡುತ್ತೇವೆ. ಒಂದು ಲೋಟ ಕಾಫಿ ಕೊಟ್ಟು, ಎರಡು ಬಿಸ್ಕೆಟ್ ಕೊಟ್ಟು ನಮ್ಮನ್ನು ಮನೆಗೆ ಕಳುಹಿಸುತ್ತಾರೆ. ಇಷ್ಟೇ ಈ ಸಲಹಾ ಸಮಿತಿಯ ಕೆಲಸ. ದಯವಾಡಿ ಈ ಸಲಹಾ ಸಮಿತಿಯನ್ನು ರದ್ದು ಮಾಡಿ. ಇಲ್ಲಿರುವ ಅನೇಕ ಶಾಸಕರಲ್ಲಿ ಯಾರನ್ನು ಬೇಕಾದರೂ ಕೇಳಿ ಶಾಸಕರ ಸಲಹೆಯನ್ನು ಪಡೆದುಕೊಂಡು ಇದನ್ನು ರದ್ದು ಮಾಡುವುದು ಒಳ್ಳೆಯದು ಎಂದು ಅಧ್ಯಕ್ಷರ ಮೂಲಕ ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ಶಾಸನ ದತ್ತವಾಗಿ ತಮಗೆ ಗೊತ್ತಿರುವ ಹಾಗೆ ಈ ಎರಡೂ ಘಟಕಗಳಿಗೆ ಅಧಿಕಾರ ಇದೆ. ಒಂದು ಮಂಡಲ ಪಂಚಾಯಿತಿ ಮತ್ತು ಇನ್ನೊಂದು ಜಿಲ್ಲಾ ಪರಿಷತ್ತು. ಮಧ್ಯಂತರವಾದ ಘಟಕಗಳು ಚುನಾಯಿತವಾದಂಥ ಘಟಕಗಳಲ್ಲ, ಇವು ಚುನಾಯಿತ ಘಟಕ ಅಲ್ಲದೇ ಇದ್ದರೂ ಕೂಡಾ ಹೆಚ್ಚು ಕೆಲಸ ಮಾಡುವುದಕ್ಕೆ ಅವಕಾಶ ಇದೆ. ಜಿಲ್ಲಾ ಪರಿಷತ್ ಪರವಾಗಿ ಉಪಸಮಿತಿ ರೀತಿಯಲ್ಲಿ, ಮಂಡಲಿಗಳಲ್ಲಿ ಎಲ್ಲರಿಗೂ ಬೇಕಾಗಿರತಕ್ಕಂಥ ಅಧಿಕಾರ ತಂತ್ರಜ್ಞಾನವನ್ನು ಕೊಡತಕ್ಕಂಥ ರೀತಿಯಲ್ಲಿ, ಎಲ್ಲಾ ಕಾರ್ಯ ಕ್ರಮಗಳನ್ನೂ ಕ್ರೊಢೀಕರಿಸತಕ್ಕ ಅಧಿಕಾರ ಇವುಗಳಿಗೆ ಇದೆ. ಅದನ್ನು ಉಪಯೋಗಿಸತಕ್ಕ ಜಾಣ್ಮೆಯ ಮೇಲೆ ಈ ಸಮಿತಿಯ ಪ್ರಭಾವ ಗೊತ್ತಾಗುತ್ತದೆ.

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೧೬೭ (೬೧೫) ಮಾನ್ಯ ಸದಸ್ಯರ ಗೈರುಹಾಜರಿ.

ಆಕ್ಟಾಯಿ ಅನುದಾನ ಕುರಿತು

೬೧೫. ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ (ರೋಣ)—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆಕ್ಟಾಯಿ ಅನುದಾನವನ್ನು ಪಡೆಯುದಿರುವ ನಗರಸಭೆಗಳ ಸಂಖ್ಯೆ ಎಷ್ಟು ?

ಆ) ಈ ನಗರಸಭೆಗಳಿಗೆ ಆಕ್ಟಾಯಿ ಅನುದಾನವನ್ನು ಮಂಜೂರು ಮಾಡಲು ಸರ್ಕಾರದವರು ಒಪ್ಪಿಕೊಂಡಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಸದರಿ ನಗರಸಭೆಗಳಿಗೆ ಆಕ್ಟಾಯಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು)—

ಅ) ೨೭ ಪುರಸಭೆಗಳು.

ಆ) ಇಲ್ಲ. ಆದರೆ ತಲಾ ೬.೮೩ರೂ.ಗಳಂತೆ ೧೯೭೧ರ ಜನಗಣತಿ ಆಧಾರದ ಮೇಲೆ ದಿನಾಂಕ ೨೩-೧೧-೧೯೮೭ರಲ್ಲಿ ಪರಿಹಾರ ಬಿಡುಗಡೆ ಮಾಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ,—ಮಾನ್ಯ ಅಧ್ಯಕ್ಷರೇ. ಪ್ರತಿವರ್ಷ ಜನಗಣತಿಯ ಆಧಾರದ ಮೇಲೆ ತಲಾ ೬.೮೩ ರೂಪಾಯಿಗಳಂತೆ ಪರಿಹಾರಧನವನ್ನು ಬಿಡುಗಡೆ ಮಾಡುತ್ತಿದ್ದಾರೆ. ಇದನ್ನು ಹೆಚ್ಚು ಮಾಡಲು ಸರ್ಕಾರದವರು ಮನಸ್ಸು ಮಾಡಿದ್ದಾರೆಯೇ ? ಇನ್ನೊಂದು ವಿಚಾರ ಎಂದರೆ, ಇದಕ್ಕೆ ೧೯೭೧ನೇ ಇಸವಿಯ ಜನಗಣತಿಯನ್ನು ಆಧಾರವಾಗಿ ಹಿಡಿದಿದ್ದಾರೆ, ೧೯೮೧ನೇ ಇಸವಿಯ ಜನಗಣತಿಯ ಪ್ರಕಾರವಾಗಿ ಇದನ್ನು ಕೊಡುತ್ತಾರೆಯೇ ಎಂಬ ಬಗ್ಗೆ ವಿಚಾರ ಮಾಡಬೇಕೆಂದು ಕೋರುತ್ತೇನೆ.